KAHS610003642023

## 3ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚನ್ನರಾಯಪಟ್ಟಣ

**ಉಪಸ್ಥಿತರುಃ** **ಮಧುಶ್ರೀ ಆರ್. ಎಂ.,**

ಎಂ. ಎ., ಎಲ್.ಎಲ್.ಬಿ.

**3ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಚನ್ನರಾಯಪಟ್ಟಣ**

ದಿನಾಂಕಃ 26ನೇ ಸೆಪ್ಟೆಂಬರ್ 2025

## ಅಸಲು ದಾವಾ ನಂ. O.S./144/2023

**ವಾದಿಃ**

ಕೆ ಹೆಚ್ ಕಾಮಾಕ್ಷಿ ಬಿನ್ ಲೇಟ್ ಹನುಮಯ್ಯ
ಕೋಂ ನಾಗರಾಜು
ಸುಮಾರು 43 ವರ್ಷ ವಯಸ್ಸು
ವಾಸಃ ಕಲ್ಕೆರೆ ಗ್ರಾಮ , ನುಗ್ಗೇಹಳ್ಳಿ ಹೋಬಳಿ
ಚನ್ನರಾಯಪಟ್ಟಣ ತಾಲ್ಲೂಕು , ಹಾಸನ ಜಿಲ್ಲೆ .

**-ವಿರುದ್ಧ-**

**ಪ್ರತಿವಾದಿಗಳುಃ**

1. ಕೆ ಹೆಚ್ ರಂಗಸ್ವಾಮಿ ಬಿನ್ ಲೇಟ್ ಹನುಮಯ್ಯ
ಸುಮಾರು 50 ವರ್ಷ ವಯಸ್ಸು

2. ಅನುಸೂಯ ಕೋಂ ಕೆ ಹೆಚ್ ರಂಗಸ್ವಾಮಿ
ಸುಮಾರು 45 ವರ್ಷ ವಯಸ್ಸು
ವಾಸಃ ಕಲ್ಕೆರೆ ಗ್ರಾಮ , ನುಗ್ಗೇಹಳ್ಳಿ ಹೋಬಳಿ
ಚನ್ನರಾಯಪಟ್ಟಣ ತಾಲ್ಲೂಕು , ಹಾಸನ ಜಿಲ್ಲೆ .

**ಮಧ್ಯಕಾಲೀನ ಅರ್ಜಿ ಸಂಖ್ಯೆ 5**

**ಅರ್ಜಿದಾರರು:** ಕಾಮಾಕ್ಷಿ

**(ವಾದಿ )**

**-ವಿರುದ್ಧ-**

**ಎದುರುದಾರರು:** ರಂಗಸ್ವಾಮಿ ಮತ್ತು ಇತರರು

**( ಪ್ರತಿವಾದಿಗಳು )**

## :: ಮಧ್ಯಕಾಲೀನ ಅರ್ಜಿ ಸಂಖ್ಯೆ 5ರ ಮೇಲೆ ಆದೇಶ ::

ಅರ್ಜಿದಾರರು / ವಾದಿಯ ಮಧ್ಯಕಾಲೀನ ಅರ್ಜಿ ಸಂಖ್ಯೆ 5ನ್ನು ಕ್ರಮಾದೇಶ 6 ನಿಯಮ 17ರ ಸಿ ಪಿ ಸಿ ಅಡಿಯಲ್ಲಿ ಸಲ್ಲಿಸಿ, ಉದ್ದೇಶಿತ ತಿದ್ದುಪಡಿಯಂತೆ ವಾದ ಪತ್ರವನ್ನು ತಿದ್ದುಪಡಿ ಮಾಡಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

**ತಿದ್ದುಪಡಿಯಾಗಬೇಕಾದ ಅಂಶಗಳು**

1) ವಾದ ಪತ್ರದ 2ನೇ ಪುಟದ 4ನೇ ಸಾಲಿನಲ್ಲಿ '1ನೇ ರಂಗಮ್ಮ ರವರಿಗೆ' ನಂತರದಲ್ಲಿ 'ಜಯಲಕ್ಷ್ಮಮ್ಮ, ಮೀನಾಕ್ಷಿ ಎಂಬ ಹೆಣ್ಣು ಮಕ್ಕಳಿದ್ದು, ಸಂತಾನವಿಲ್ಲದೆ ಮೀನಾಕ್ಷಿಯು ಪೌತಿಯಾಗಿರುತ್ತಾರೆ. ಜಯಲಕ್ಷ್ಮಮ್ಮ 3ನೇ ಉದ್ದೇಶಿತ ಪ್ರತಿವಾದಿಯಾಗಿರುತ್ತಾರೆ ಎಂದು ಮುಂದುವರೆದು 5ನೇ ಸಾಲಿನಲ್ಲಿ 'ಮಗಳಾಗಿರುತ್ತಾರೆ'. ನಂತರದಲ್ಲಿ 'ನೇತ್ರಾವತಿ' ಎಂಬ ಇನ್ನೊಬ್ಬ ಮಗಳು ಚಿಕ್ಕ ವಯಸ್ಸಿನಲ್ಲಿಯೇ ಹನುಮಯ್ಯರವರ 2ನೇ ಹೆಂಡತಿ ಸಾಕಮ್ಮರವರ ಮಗಳು ಪೌತಿಯಾಗಿರುತ್ತಾಳೆ. 4ನೇ ಉದ್ದೇಶಿತ ಪ್ರತಿವಾದಿಯು ವಾದಿಯ ಅತ್ತೆಯಾದ ತಿಮ್ಮಮ್ಮರವರ ಮಗಳಾಗಿರುತ್ತಾರೆ. ಹಾಗೂ 5ನೇ ಉದ್ದೇಶಿತ ಪ್ರತಿವಾದಿಯು ಒಟ್ಟು ಕುಟುಂಬದ ಸ್ವತ್ತು ಸರ್ವೆ ನಂ: 172ರಲ್ಲಿ 3 ಎಕರೆ 39 ಗುಂಟೆ ಪೈಕಿ 1 ಎಕರೆ 39 ಗುಂಟೆ ಸ್ವತ್ತಿನ ಕ್ರಯದಾರರಾಗಿರುತ್ತಾರೆ.

2) ದಾವಾ ಪತ್ರದ 3ನೇ ಪ್ಯಾರದ 6ನೇ ಸಾಲಿನ ನಂತರದಲ್ಲಿ 'ಹಾಗೇಯೆ ಕಲ್ಕೆರೆ ಗ್ರಾಮದ ಸರ್ವೆ ನಂಃ 172ರಲ್ಲಿ 3.39.00 ಗುಂಟೆ ಪಿತ್ರಾರ್ಜಿತ ಸ್ವತ್ತನ್ನು 1ನೇ ಪ್ರತಿವಾದಿಯು ತಂದೆಯ ಮರಣದ ನಂತರ ವಿಭಜನೆ ಎಂದು ಕಾಣಿಸಿ ಎಂ ಆರ್ 21/94-95ರ ರೀತ್ಯಾ ತನ್ನ ಹೆಸರಿಗೆ ಖಾತೆಯನ್ನು ಮಾಡಿಸಿಕೊಂಡು ಸದರಿ ಸ್ವತ್ತನ್ನು ತನ್ನ ಸೋದರತ್ತೆಯಾದ ತಿಮ್ಮಮ್ಮ ಕೋಂ ಕೆಂಗಯ್ಯ ರವರಿಗೆ ದಿಃ 14.07.2004ರಂದು ಒಂದು ನೋಂದಾಯಿತವಲ್ಲದ ಹಕ್ಕು ಖುಲಾಸೆ ಪತ್ರವನ್ನು ವಾದಿಗೆ ಹಿಸ್ಸೆ ಕೊಡಬಾರದೆಂಬ ದುರುದ್ದೇಶದಿಂದ ಸೃಷ್ಟಿಸಿರುತ್ತಾರೆ. ಸದರಿ ಸ್ವತ್ತಿನ ಪಹಣಿಯಲ್ಲಿ ಒಟ್ಟು 2 ಎಕರೆ 39 ಗುಂಟೆ ವಿಸ್ತೀರ್ಣವು ಪ್ರಸ್ತುತ ಪುಟ್ಟಸ್ವಾಮಿಶೆಟ್ಟಿ ಬಿನ್ ಕೆಂಪಶೆಟ್ಟಿಯ ಕುಟುಂಬದ ಹೆಸರಿನಲ್ಲಿ ಬರುತ್ತಿದ್ದು, ಸದರಿ ಖಾತೆ ಬದಲಾವಣೆಗಳು ವಾದಿಗೆ 3ನೇ ದಾವಾ ಅನುಸೂಚಿ ಸ್ವತ್ತಿನಲ್ಲಿರುವ ಹಿಸ್ಸಾ ಹಕ್ಕಿಗೆ ಬದ್ಧಪಡಿಸುವುದಿಲ್ಲ. 1ನೇ ಪ್ರತಿವಾದಿಯು 2014-15ನೇ ಸಾಲಿನಲ್ಲಿ ತನ್ನ ಹೆಂಡತಿಯಾದ 2ನೇ ಪ್ರತಿವಾದಿಗೆ ಕಲ್ಕೆರೆ ಗ್ರಾಮದ ಆಸ್ತಿ ಸಂಖ್ಯೆಃ 166ರಲ್ಲಿ ಇರುವ ವಾದಿಯ ತಂದೆಯ ಮನೆಯನ್ನು ವಾದಿಗೆ ಮೋಸ ಮಾಡುವ ದುರುದ್ದೇಶದಿಂದ ಖಾತೆ ಮಾಡಿಸಿರುತ್ತಾರೆ. ಸದರಿ ಖಾತಾ ಬದಲಾವಣೆಗಳು ಈ ವಾದಿಯ ಹಿಸ್ಸಾ ಹಕ್ಕಿಗೆ ಬದ್ಧಪಡಿಸುವುದಿಲ್ಲ. ಕ್ರಯಕ್ಕೆ ನೀಡಿರುವ ಸ್ವತ್ತಿನಲ್ಲಿಯೂ ವಾದಿಯ ಹಿಸ್ಸಾ ಹಕ್ಕು ಇರುತ್ತದೆ ಹಾಗೂ ಸದರಿ ಕ್ರಯಪತ್ರವು ವಾದಿಯ ಹಕ್ಕಿಗೆ ಬದ್ಧಪಡಿಸುವುದಿಲ್ಲ' ಎಂದೂ,

3) ವಾದಾ ಪತ್ರದ 3ನೇ ಪುಟದ 5ನೇ ಪ್ಯಾರಾದ 8ನೇ ಸಾಲಿನಲ್ಲಿ ತನಗಿರುವ 1/2 ಎನ್ನುವುದರ ಬದಲು '1/3' ಎಂದೂ,

4) ಜಡ್ಜ್ಮೆಂಟ್ ಮತ್ತು ಡಿಕ್ರಿಯ ಪ್ರಾರ್ಥನೆಯ ಎ) ರಲ್ಲಿ '1/2' ಎನ್ನುವ ಬದಲು '1/3' ಎಂದೂ,

5) ಜಡ್ಜೆಮೆಂಟ್ ಮತ್ತು ಡಿಕ್ರಿಯ ಪ್ರಾರ್ಥನೆಯ ಬಿ)--------- ನಂತರ ಇ) 1ನೇ ಪ್ರತಿವಾದಿಯು ದಾವಾ ವಹಿಸುವಂತೆಯೂ ಎಂಬುದರ ಅನುಸೂಚಿ

1ನೇ ಸ್ವತ್ತಿನ ಬಗ್ಗೆ ಪ್ರತಿವಾದಿಯು ದಾವಾ ಅನುಸೂಚಿ 1ನೇ ಸ್ವತ್ತಿನ ಬಗ್ಗೆ ಮಾಡಿಕೊಂಡಿರುವ ಖಾತೆ ಬದಲಾವಣೆಯು, 2ನೇ ಪ್ರತಿವಾದಿಯು ದಾವಾ ಅನುಸೂಚಿ 2ನೇ ಸ್ವತ್ತಿನ ಬಗ್ಗೆ ಮಾಡಿಕೊಂಡಿರುವ ಖಾತೆ ಬದಲಾವಣೆಯು 1ನೇ ಪ್ರತಿವಾದಿಯು ದಾವಾ ಅನುಸೂಚಿ 3ನೇ ಸ್ವತ್ತಿನಲ್ಲಿ ಮಾಡಿರುವ ಖಾತೆ ಬದಲಾವಣೆಯು ವಾದಿಯ ಹಿಸ್ಸಾ ಹಕ್ಕಿಗೆ ಬದ್ದಪಡಿಸುವುದಿಲ್ಲ ' ಎಂದೂ,

6) ದಾವಾ ಅನುಸೂಚಿ ಸ್ವತ್ತುಗಳ ವಿವರದ ಕ್ರಮ ಸಂಖ್ಯೆ 1ರ ನಂತರ '

2) ಹಾಸನ ಜಿಲ್ಲೆ , ಚನ್ನರಾಯಪಟ್ಟಣ ತಾಲ್ಲೂಕು, ನುಗ್ಗೇಹಳ್ಳಿ ಹೋಬಳಿ, ಕಲ್ಕೆರೆ ಗ್ರಾಮಕ್ಕೆ ಸೇರಿದ ಆಸ್ತಿ ಸಂಖ್ಯೆ 166ರ ವಾಸದ ಮನೆಗೆ ಚೆಕ್ಕುಬಂಧಿಃ

| | |
|---|---|
| ಪೂರ್ವಕ್ಕೆ | ಅಮಾಸಯ್ಯ |
| ಪಶ್ಚಿಮಕ್ಕೆ | ದಾರಿ ಮತ್ತು ಪ್ರೈಮರಿ ಸ್ಕೂಲ್ |
| ಉತ್ತರಕ್ಕೆ | ಸಣ್ಣತಾಯಮ್ಮ, ಲಕ್ಷ್ಮಯ್ಯರವರ ಮನೆ |
| ದಕ್ಷಿಣಕ್ಕೆ | ತೋಟ |

3) ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ನುಗ್ಗೇಹಳ್ಳಿ ಹೋಬಳಿ, ಕಲ್ಕೆರೆ ಗ್ರಾಮಕ್ಕೆ ಸೇರಿದ ಸರ್ವೆ ನಂಃ 172ರಲ್ಲಿರುವ ಒಟ್ಟು 3.39 ಗುಂಟೆ ಜಮೀನಿಗೆ ಚೆಕ್ಕುಬಂಧಿಃ

| | |
|---|---|
| ಪೂರ್ವಕ್ಕೆ | ಮಲ್ಲೇಶಗೌಡ |
| ಪಶ್ಚಿಮಕ್ಕೆ | ರಸ್ತೆ |
| ಉತ್ತರಕ್ಕೆ | ಶಿವಲಿಂಗಶೆಟ್ಟಿ |
| ದಕ್ಷಿಣಕ್ಕೆ | ಸರ್ಕಾರಿ ಜಾಗ' |

**2.** ಅರ್ಜಿದಾರರು ತಮ್ಮ ಪ್ರಮಾಣ ಪತ್ರದಲ್ಲಿ ತಾನು ಈ ದಾವಾವನ್ನು ಪ್ರತಿವಾದಿಗಳ ವಿರುದ್ಧ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ 1/4 ಭಾಗಾಂಶ ಹಾಗೂ ಪ್ರತ್ಯೇಕ ಸ್ವಾಧೀನತೆ ಕೋರಿ ಸಲ್ಲಿಸಿದ್ಧು, ದಾವಾ ಸಲ್ಲಿಸುವಾಗ ಸರಿಯಾದ ಮಾಹಿತಿ ಇಲ್ಲದ ಕಾರಣ ಮತ್ತು ಪ್ರತಿವಾದಿಗಳು 5ನೇ ಉದ್ದೇಶಿತ ಪ್ರತಿವಾದಿ ಹೆಸರಿಗೆ ವಿಲೇವಾರಿ ಮಾಡಿರುವ ಸ್ವತ್ತುಗಳ ಬಗ್ಗೆ ದಾಖಲಾತಿಗಳು ಸಿಗದ

ಕಾರಣ ಕಾಲವಿಳಂಭವಾಗಿರುತ್ತದೆ. ಪ್ರಸ್ತುತದಲ್ಲಿ ಮಾಹಿತಿ ಸಿಕ್ಕಿರುವ ಕಾರಣ ಉದ್ದೇಶಿತ ತಿದ್ದುಪಡಿಯಂತೆ ವಾದಪತ್ರದ ತಿದ್ದುಪಡಿ ಕೋರಿ ಅರ್ಜಿದಾರರು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**3.** ಅರ್ಜಿದಾರರು ಸಲ್ಲಿಸಿದ ಅರ್ಜಿಗೆ ಎದುರುದಾರರು / ಪ್ರತಿವಾದಿಗಳು ತಕರಾರನ್ನು ಸಲ್ಲಿಸಿದ್ದು, ತಮ್ಮ ತಕಾರರಿನಲ್ಲಿ ದಾವಾ ಸಲ್ಲಿಸುವಾಗ ಆಗಿರುವ ತಪ್ಪನ್ನು ಸರಿಪಡಿಸಿಕೊಳ್ಳಲು ಈ ಸುಳ್ಳು ಅರ್ಜಿಯನ್ನು ತಂದಿದ್ದು, ಅರ್ಜಿಯನ್ನು ಪುರಸ್ಕರಿಸಿದ್ದಲ್ಲಿ ದಾವಾ ವಸ್ತು, ಸ್ಥಿತಿ, ವ್ಯಾಜ್ಯ ಕಾರಣ ಬದಲಾಗುವುದರಿಂದ ಅರ್ಜಿದಾರ / ವಾದಿ ಸಲ್ಲಿಸಿರುವ ಈ ಮಧ್ಯಂತರ ಅರ್ಜಿಯನ್ನು ಖರ್ಚು ಸಮೇತ ವಜಾಗೊಳಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

**4.** ಉಭಯಪಕ್ಷಗಾರರ ವಾದವನ್ನು ಆಲಿಸಿದ ನಂತರ ಈ ಕೆಳಕಂಡ ಅಂಶಗಳು ನ್ಯಾಯಾಲಯದ ನಿರ್ಣಯಕ್ಕೆ ಉಂಟಾಗಿರುತ್ತವೆ.

1. ***ಅರ್ಜಿದಾರರು ಸಲ್ಲಿಸಿದ ಮಧ್ಯಕಾಲೀನ ಅರ್ಜಿ ಸಂಖ್ಯೆ: 5ನ್ನು ಪುರಸ್ಕರಿಸಲು ಸಕಾರಣಗಳಿವೆಯೇ ಎಂಬುದನ್ನು ರುಜುವಾತುಪಡಿಸುತ್ತಾರೆಯೇ ?***
2. ***ಯಾವ ಆದೇಶ ?***

**5.** ಈ ಮೇಲಿನ ಅಂಶಗಳಿಗೆ ನ್ಯಾಯಾಲಯದ ನಿರ್ಣಯ ಈ ಕೆಳಗಿನಂತೆ ಇರುತ್ತವೆ.

ಅಂಶಃ 1 ಃ **ಸಕಾರಾತ್ಮಕವಾಗಿ**

ಅಂಶಃ 2 ಃ ಕೊನೆಯ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ,

**ಕಾರಣಗಳು**

**6.** **ಅಂಶ ಸಂಖ್ಯೆ 1ಃ** ವಾದಿಯು ಈ ದಾವಾವನ್ನು ಪ್ರತಿವಾದಿಗಳ ವಿರುದ್ಧ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ 1/4 ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನತೆ ಆದೇಶ ಕೋರಿ ಸಲ್ಲಿಸಿರುತ್ತಾರೆ.

**7.** ಪ್ರಸ್ತಾಪಿತ ತಿದ್ದುಪಡಿಯಲ್ಲಿ ನಮೂದಿಸಿರುವ ವಿಚಾರಗಳನ್ನು ಮಾಹಿತಿಯ ಕೊರತೆಯಿಂದ ಮತ್ತು ದಾಖಲಾತಿಗಳು ಲಭ್ಯವಾಗದಿದ್ದರಿಂದ ಪ್ರಸ್ತುತದಲ್ಲಿ ಈ ಅರ್ಜಿಯನ್ನು

ಸಲ್ಲಿಸಿದ್ದು, ವಾದಿಯು ಸೂಕ್ತ ಪರಿಹಾರ ಹೊಂದಲು ಪ್ರಸ್ತಾಪಿತ ತಿದ್ದುಪಡಿಯಂತೆ ವಾದ ಪತ್ರವನ್ನು ತಿದ್ದುಪಡಿ ಮಾಡುವುದು ಅವಶ್ಯಕವಾಗಿದ್ದು, ಪ್ರಸ್ತಾಪಿತ ತಿದ್ದುಪಡಿಗಳಿಂದ ದಾವಾದ ವ್ಯಾಜ್ಯ ಕಾರಣ ಮತ್ತು ಸ್ವರೂಪ ಬದಲಾಗದೆ ಇರುವುದರಿಂದ ಪ್ರಸ್ತಾಪಿತ ತಿದ್ದುಪಡಿಯಂತೆ ವಾದಪತ್ರವನ್ನು ತಿದ್ದುಪಡಿ ಮಾಡಲು ವಾದಿಯ ಪರ ವಕೀಲರು ಪ್ರಾರ್ಥಿಸಿರುತ್ತಾರೆ.

**8.** ಪ್ರತಿವಾದಿಗಳ ಪರ ವಕೀಲರು ಪ್ರಸ್ತಾಪಿತ ತಿದ್ದುಪಡಿಗಳು ವಾದಪತ್ರದ ವಸ್ತು, ಸ್ಥಿತಿ, ಮತ್ತು ವ್ಯಾಜ್ಯ ಕಾರಣವನ್ನು ಬದಲಾಯಿಸುವುದರಿಂದ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

**9.** ಈ ಹಂತದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17ನ್ನು ಉಲ್ಲೇಖಿಸುವುದು ಸೂಕ್ತವಾಗಿದೆ.

> ***ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17*** *ರ ಪ್ರಕಾರ, ವಾದಗಳ ತಿದ್ದುಪಡಿ (Amendment of pleadings) ನ್ಯಾಯೋಚಿತವಾಗಬಹುದಾದ ರೀತಿಯಲ್ಲಿ ಮತ್ತು ಅಂತಹ ನಿಬಂಧನೆಗಳ ಮೇಲೆ ಯಾವನೇ ಪಕ್ಷಕಾರನ ವಾದ ಪ್ರತಿವಾದ ಪತ್ರವನ್ನು ಬದಲಾಯಿಸಲು ಅಥವಾ ತಿದ್ದುಪಡಿ ಮಾಡಲು ವ್ಯವಹರಣೆಯ ಯಾವುದೇ ಹಂತದಲ್ಲಿ ನ್ಯಾಯಾಲಯವು ಅವನಿಗೆ ಅವಕಾಶ ಕೊಡಬಹುದು ಮತ್ತು ಪಕ್ಷಕಾರರ ನಡುವೆ ವಾದದಲ್ಲಿರುವ ನಿಜವಾದ ಪ್ರಶ್ನೆಗಳನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂತಹ ಎಲ್ಲ ದುರಸ್ತುಗಳನ್ನು ಮಾಡತಕ್ಕದ್ದು.*

**10.** ಪ್ರಸ್ತುತದಲ್ಲಿ ದಾವೆಯು ಮಧ್ಯಂತರ ಅರ್ಜಿ ಸಂಖ್ಯೆ: 3 ಮತ್ತು 4 ರ ಮೇಲೆ ವಾದ ಮಂಡನೆಗೆಂದು ನಿಗಧಿಯಾಗಿದ್ದಾಗ ಅರ್ಜಿದಾರರು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ದಾವಾದಲ್ಲಿ ವಿಚಾರಣೆಯು ಇನ್ನು ಪ್ರಾರಂಭವಾಗಿರುವುದಿಲ್ಲ. ದಾವೆಯು ಭಾಗಾಂಶಕ್ಕಾಗಿ ಕೋರಿ

ಸಲ್ಲಿಸಿರುವುದರಿಂದ ಒಟ್ಟು ಕುಟುಂಬಕ್ಕೆ ಸಂಬಂಧಿಸಿದ ಎಲ್ಲಾ ಆಸ್ತಿಗಳನ್ನು ದಾವಾದಲ್ಲಿ ಸೇರಿಸುವುದರಿಂದ ಸರಿಯಾದ ನ್ಯಾಯ ನಿರ್ಣಯಕ್ಕೆ ಅನುಕೂಲವಾಗುತ್ತದೆ. ಅಲ್ಲದೆ ವಾದಿಯು ಕೇಳಿರುವ ತಿದ್ದುಪಡಿಗಳು ದಾವಾದ ಮೇಲಾಗಲಿ ಅಥವಾ ವ್ಯಾಜ್ಯ ಕಾರಣದ ಮೇಲಾಗಲಿ ಯಾವುದೇ ಅಡ್ಡಪರಿಣಾಮವನ್ನು ಉಂಟು ಮಾಡುವುದಿಲ್ಲ. ಪ್ರಸ್ತಾಪಿತ ತಿದ್ದುಪಡಿಯಂತೆ ದಾವಾವನ್ನು ರುಜುವಾತುಪಡಿಸುವ ಹೊಣೆಗಾರಿಕೆಯು ವಾದಿಯ ಮೇಲೆ ಇರುತ್ತದೆ. ಬಹು ಕಾನೂನು ಪ್ರಕ್ರಿಯೆಗಳಿಂದ ಈ ದಾವಾವನ್ನು ತಡೆಯುವ ನಿಟ್ಟಿನಲ್ಲಿ ಹಾಗೂ ಪ್ರಸ್ತಾಪಿತ ತಿದ್ದುಪಡಿಗಳು ದಾವಾದ ವ್ಯಾಜ್ಯ ಕಾರಣವನ್ನಾಗಲಿ, ದಾವಾದ ಸ್ವರೂಪವನ್ನಾಗಲಿ ಬದಲಾಯಿಸದೆ ಇರುವುದರಿಂದ ಈ ಅರ್ಜಿಯನ್ನು ಪುರಸ್ಕರಿಸಬಹುದಾಗಿರುತ್ತದೆ. ಹಾಗಾಗಿ **ಅಂಶ ಸಂಖ್ಯೆ 1ನ್ನು ಸಕಾರಾತ್ಮಕವಾಗಿ** ಉತ್ತರಿಸಲಾಗಿದೆ.

**11.** **ಅಂಶ ಸಂಖ್ಯೆ 2ಃ** ಅಂಶ ಸಂಖ್ಯೆ 1 ರಲ್ಲಿ ತಿಳಿಸಿರುವ ಕಾರಣಗಳಿಗಾಗಿ ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ವಾದಿ / ಅರ್ಜಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 6 ನಿಯಮ 17ರಡಿಯಲ್ಲಿ ಸಲ್ಲಿಸಿರುವ ಮಧ್ಯಕಾಲೀನ ಅರ್ಜಿ ಸಂಖ್ಯೆ 5ನ್ನು ರೂ.200/-ರ ಖರ್ಚಿನೊಂದಿಗೆ ಪುರಸ್ಕರಿಸಲಾಗಿದೆ .

ಅರ್ಜಿಯಲ್ಲಿ ಪ್ರಾರ್ಥಿಸಿದಂತೆ ವಾದ ಪತ್ರವನ್ನು ತಿದ್ದುಪಡಿ ಮಾಡಿ, ತಿದ್ದುಪಡಿ ವಾದಪತ್ರವನ್ನು ಸಲ್ಲಿಸುವಂತೆ ನಿರ್ದೇಶಿಸಲಾಗಿದೆ.

*(ಈ ತೀರ್ಪನ್ನು ಶೀಘ್ರಲಿಪಿಗಾರ್ತಿಗೆ ಉಕ್ತಲೇಖನವನ್ನು ಕೊಟ್ಟು, ಆಕೆಯು ಗಣಕ ಯಂತ್ರದ ಮೇಲೆ ಬೆರಳಚ್ಚು ಮಾಡಿದ ನಂತರ ತಪ್ಪಿದಲ್ಲಿ ತಿದ್ದಿ ಇಂದು* ***ದಿನಾಂಕ*** *26ನೇ ಸೆಪ್ಟೆಂಬರ್ 2025 ರಂದು ಈ ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)*

MADHUSHREE R M

Digitally signed by MADHUSHREE R M
Date: 2025.10.10 15:48:24 +0530

**(ಮಧುಶ್ರೀ ಆರ್.ಎಂ)**
**3ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**